ದಿ: 16-09-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ.ಕೆ., ವಕೀಲರಿಂದ ಆರೋಪಿತರ ಪರವಾಗಿ:**

5. ಸುಮಾರು ಪ್ರಕರಣಗಳಲ್ಲಿ ಪಂಚನಾಗಿ ಸಾಹೇಬರು ನನಗೆ appoint ಮಾಡಿದ್ದಾರೆ ಅಂದರೆ ನಿಜ. ಆ ಎಲ್ಲಾ ಪ್ರಕರಣಗಳಲ್ಲಿ ನಾನು ಪಂಚರಾಗಿ ಹಾಜರಾಗಿದ್ದೇನೆ. ನಿಪಿ-10 ರಲ್ಲಿ ಆರೋಪಿಯ ಅಂಗ ಶೋಧನೆಯನ್ನು ನ್ಯಾಯಾಧೀಶರ ಮುಂದೆ ಅಥವಾ ಗೆಜೆಟೆಡ್ ಆಫೀಸರ್ ಸಮಕ್ಷಮದಲ್ಲಿ ಮಾಡಬೇಕು ಅಂತ ನಮೂದು ಮಾಡಿಲ್ಲ ಅಂದರೆ ಅದು ನನಗೆ ಸಂಬಂಧಿಸಿದ್ದು ಅಲ್ಲ. ಚಿಂದೋಡಿ ಲೀಲಾ ರಂಗ ಮಂದಿರ, ಗಣೇಶ ದೇವಸ್ಥಾನನೇದರಲ್ಲಿ 4 ರಸ್ತೆಗಳು intersection ಇದೆ ಅಂದರೆ ನಿಜ. ಸಾಮಾನ್ಯವಾಗಿ ಅಲ್ಲಿ ಜನರು ಮತ್ತು ವಾಹನ ಸಂಚಾರ ಇದ್ದೇ ಇರುತ್ತದೆ. ಅಲ್ಲಿ National Highway ಯ ಸರ್ವೀಸ್ ರಸ್ತೆ ಕಡೆ join ಆಗುತ್ತದೆ ಅಂದರೆನಿಜ. ಆ ಸ್ಥಳದಲ್ಲಿ ಸಿಸಿಟಿವಿಯನ್ನು ಟ್ರಾಫಿಕ್ ಪೊಲೀಸರು ಅಳವಡಿಸಿದ್ದಾರೆ ಅಂದರೆ ಈ ಘಟನೆಯಾದಾಗ ಇರಲಿಲ್ಲ. ಅಲ್ಲಿ ಸಿಸಿಟಿವಿ ಇದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಚೀಂದೋಡಿ ಲೀಲಾ ರಂಗ ಮಂದಿರ, ಗಣೇಶ ದೇವಸ್ಥಾನ ಬಳಿ ಸಹಿತ ಸಿಸಿಟಿವಿ ಇರುತ್ತದೆ ಅಂದರೆ ಇರಬಹುದು. ಆ ಸ್ಥಳದಲ್ಲಿ ನಾವು ಶೋಧನೆ ಮಾಡಿದ ಬಗ್ಗೆ ವಿಡಿಯೋಗ್ರಾಫಿ ಮಾಡಿಲ್ಲ ಅಂದರೆ ಸುಳ್ಳು. ನಿಪಿ- 12 ರ ಪಂಚನಾಮೆ, ನಿಪಿ-23 ರ ಕರಡು ನಕ್ಷೆ ಮತ್ತು ನಿಪಿ-13 ರಿಂದ 15 ರ ಭಾವಚಿತ್ರಗಳು ಒಂದಕ್ಕೊಂದು ವ್ಯತಿರಿಕ್ತವಾಗಿರುತ್ತವೆ ಅಂದರೆ ಸರಿಯಲ್ಲ. ನಿಪಿ-13 ರಿಂದ 16 ರ ಭಾವಚಿತ್ರಗಳಲ್ಲಿ ಚಿಂದೋಡಿ ಲೀಲಾ ರಂಗ ಮಂದಿರ ಕಾಣುತ್ತಿಲ್ಲ ಅಂದರೆ ನಿಪಿ-14 ರಲ್ಲಿ ಅದು ಕಂಡು ಬರುತ್ತದೆ. ಭಾವಚಿತ್ರಗಳು ಸೃಷ್ಟಿಸಿದ್ದು ಇರುತ್ತದೆ ಅಂದರೆ ಸರಿಯಲ್ಲ. ನನ್ನ ಸಮಕ್ಷಮ ಆರೋಪಿ ನನಗೆ ನ್ಯಾಯಾಧೀಶರ ಮುಂದೆ ಅಂಗ ಶೋಧನೆ ಮಾಡಬೇಕು ಅಂತ ಹೇಳಿದರು ಅಂದರೆ ಸರಿಯಲ್ಲ. ಆಗ ನಾವೆಲ್ಲರೂ ಸೇರಿ ಆರೋಪಿಗೆ ಹೆದರಿಸಿದೆವು ಅಂದರೆ ಸರಿಯಲ್ಲ. ಆರೋಪಿ ನಾನು ಹೇಳಿದ ರೀತಿ ಯಾವುದೇ ಹೇಳಿಕೆ ನೀಡಿರುವುದಿಲ್ಲ ಅಂದರೆ ಸರಿಯಲ್ಲ. ಈ ಆರೋಪಿಯಿಂದ ಯಾವುದೇ ಗಾಂಜಾ ಸೊತ್ತು ಅಮಾನತ್ತುಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ.

04 ರಸ್ತೆ ಕೂಡುವ ಸ್ಥಳದಲ್ಲಿ ಯಾವಾಗಲೂ Traffic Police and Highway police squad ಇರುತ್ತಾರೆ ಅಂದರೆ 2021 ರಲ್ಲಿ ಯಾರೂ ಇರಲಿಲ್ಲ. ಆ ತರ ಇದ್ದರೂ ಸಹಿತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಸಮಕ್ಷಮ ತನಿಖಾಧಿಕಾರಿಗಳು Arrest memo ತಯಾರಿಸಿಲ್ಲ. Arrest memo ಗೆ ನನ್ನ ಸಹಿಯನ್ನು ಪಡೆದುಕೊಂಡಿಲ್ಲ. ಗಾಂಜಾ ಸೊತ್ತನ್ನು ಸ್ಥಳದಲ್ಲಿ Drug Identification Kit ನಿಂದ ತಪಾಸಣೆ ಮಾಡಿಲ್ಲ. ಅದರ ಸ್ಪರ್ಶದಿಂದ ಗಾಟು ವಾಸನೆ ಬಂದಿರುವುದರಿಂದ ಅದು ಗಾಂಜಾ ಅಂತ ಖಚಿತವಾಯಿತು. ಆರೋಪಿ ತನ್ನ ಊರಿಗೆ ಹೊರಟವನನ್ನು ದಸ್ತಗಿರಿ ಮಾಡಿ ಈ ಕೇಸಿನಲ್ಲಿ ಸುಳ್ಳು ಸೇರಿಸಿದ್ದೇವೆ ಅಂದರೆ ಸರಿಯಲ್ಲ. ನಾನು ಅಭಿಯೋಜನ ಸಾಕ್ಷಿನಲ್ಲಿ ಆಸಕ್ತಿವುಳ್ಳದವನಾಗಿದ್ದು ಆದ್ದರಿಂದ ನಾನು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದಾವಣಗೆರೆ.